**SET-4**

**Series SGN**

**Code No. 15**

Roll No. | | | | | | | |

Candidates must write the Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **12** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **23** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯ ಬಾರದು.
- Please check that this question paper contains **12** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **23** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 100*

*Time allowed : 3 hours* | *Maximum Marks : 100*

***ಸೂಚನೆಗಳು :*** *ಈ ಪ್ರಶ್ನೆ ಪತ್ರಿಕೆಯು A, B, C ಮತ್ತು D ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.*

| | | |
|---|---|---|
| **ವಿಭಾಗ – A** (ವ್ಯಾಕರಣ) | : | 25 ಅಂಕಗಳು |
| **ವಿಭಾಗ – B** (ಅರ್ಥಗ್ರಹಿಕೆ) | : | 10 ಅಂಕಗಳು |
| **ವಿಭಾಗ – C** (ಬರವಣಿಗೆ) | : | 15 ಅಂಕಗಳು |
| **ವಿಭಾಗ – D** (ಪಠ್ಯಗಳ ಅಧ್ಯಯನ) | : | 50 ಅಂಕಗಳು |

## ವಿಭಾಗ – A

## (ವ್ಯಾಕರಣ) : 25 ಅಂಕಗಳು

**1.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :

(ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ : *1*

ನಗರಪ್ರದೇಶಗಳಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆ ಬಹುದೊಡ್ಡ ಸಮಸ್ಯೆಯಾಗಿದೆ.

(ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ : *1*

ನಮ್ಮ ದೇಶದಲ್ಲಿ ಇದು ಹೆಚ್ಚು ಮಹತ್ವ ಪಡೆದಿರುವುದು.

(ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ : *1*

ದೇಶದಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಿದ್ದರಿಂದ ಭ್ರಷ್ಟಾಚಾರ ನಿರ್ಮೂಲನೆಯಾಯಿತು.

(ಈ) ಕೆಳಗಿನ ವಾಕ್ಯವನ್ನು ಭವಿಷತ್ ಕಾಲದಲ್ಲಿ ಬರೆಯಿರಿ : *1*

ಗಾಂಧಿ ಜಯಂತಿಯನ್ನು ಅಕ್ಟೋಬರ್ 2 ರಂದು ಆಚರಿಸಲಾಯಿತು.

(ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ : *1*

ಅನ್ಯಭಾಷೆಗಳ ಸಂಪರ್ಕದಿಂದ ಭಾಷೆಯು ಉತ್ತಮ ಅಭಿವೃದ್ಧಿ ಸಾಧಿಸಿತು.

**2.** ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ : *5*

Dreams play a vital role in shaping our future. It is rightly said, "If you can imagine it, you can achieve it; if you can dream it, you can become it." So if you have a dream, then set it up as your goal and work hard towards achieving it. Though it is easier said than done, however, if you are really hard pressed towards achieving it you shall definitely be able to make it.

You may have a big dream in life, however, in order to attain the same you must set both short term and long term goals and take small and steady steps. Taking one step at a time always helps rather than rushing into it all at once. For instance, my dream is to become a fashion designer and I know that it would only be possible if I complete a course in Fashion Designing from a reputed institute and there is nothing much that I can do to speed up the attainment of my dream right now, when I am still schooling. However, this does not dither me from following fashion blogs and websites to explore the world of fashion. By doing so I am taking the little steps I can to achieve my dream. While my ultimate goal is to become an established Fashion Designer, I have set various small goals for the months and years to come so that these take me to my ultimate goal.

**3.** ಕೆಳಗಿನ ಯಾವುದಾದರೂ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ ಛಂದಸ್ಸಿನ ಹೆಸರು ತಿಳಿಸಿ : $2\frac{1}{2}+2\frac{1}{2}=5$

(ಅ) ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ ವಲಂ ಚಲಂ

(ಆ) ರಾಮನಿನಗಲ್ಲಿತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ

(ಇ) ಎನಲು ಕಂಬನಿದುಂಬಿದನು ಕಡು
ನೆನೆದುದಂತಃಕರಣ ರೋಷದ
ಘನತೆ ಹೆಚ್ಚಿತು ಹಗೆಗಳನು ಹಿಂಡಿದನು ಮನದೊಳಗೆ

(ಈ) ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು

**4.** ಕೆಳಗಿನ ಯಾವುದಾದರೂ **ಎರಡು** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : $2\frac{1}{2}+2\frac{1}{2}=5$

(ಅ) ಆಳಾಗಿ ದುಡಿ; ಅರಸಾಗಿ ಉಣ್ಣು

(ಆ) ಸಂತೋಷವೇ ಯೌವನ; ಚಿಂತೆಯೇ ಮುಪ್ಪು

(ಇ) ತೊಟ್ಟಿಲು ತೂಗುವ ಕೈ ಜಗತ್ತನ್ನೂ ಆಳಬಲ್ಲುದು

**5.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :

(ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ : $\frac{1}{2}+\frac{1}{2}=1$

(i) ಉರಗ

(ii) ಕಲಹ

**ಅಥವಾ**

ಈ ಪದದ ನಾನಾರ್ಥಗಳನ್ನು ಬರೆಯಿರಿ :

ತ್ರಿಳಿ

(ಆ) ಈ ಜೋಡು ನುಡಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ : $1+1=2$

(i) ಪ್ರಶಸ್ತಿ – ಪುರಸ್ಕಾರ

(ii) ಸುಖ – ಸಂತೋಷ

**ಅಥವಾ**

ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ :

(i) ತಲೆಬಾಗು

(ii) ಟೋಪಿ ಹಾಕು

(ಇ) ಈ ಪದಗಳನ್ನು ಬಿಡಿಸಿ ಬರೆಯಿರಿ : *1+1=2*

(i) ಸುಲಿಯುವುದೊಂದೇ

(ii) ಮಲ್ಲನೆದ್ದನು

**ಅಥವಾ**

ಈ ಪದಗಳಲ್ಲಿನ ಪ್ರತ್ಯಯ ಗುರುತಿಸಿ ವಿಭಕ್ತಿ ಹೆಸರಿಸಿ :

(i) ಸಮತೆಯನ್ನು

(ii) ಗದ್ಯದೊಳ್

## ವಿಭಾಗ – B

## (ಅರ್ಥಗ್ರಹಿಕೆ) : 10 ಅಂಕಗಳು

**6.** ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

ಧುಮ್ಮಿಕ್ಕುತ್ತಿದ್ದ ಜೋಗ ಜಲಪಾತವನ್ನು ನೋಡಿದ ಶ್ರೀ ವಿಶ್ವೇಶ್ವರಯ್ಯನವರು 'ಎಷ್ಟೆಲ್ಲಾ ಶಕ್ತಿ ವ್ಯರ್ಥವಾಗುತ್ತಿದೆ' ಎಂದಿದ್ದರು. ನಂತರ 1930 ರ ದಶಕದಲ್ಲಿ ಜೋಗದಲ್ಲಿ ಜಲವಿದ್ಯುತ್ ಯೋಜನೆ ಆರಂಭವಾಯಿತು. ಅದಕ್ಕಿಂತ ಸುಮಾರು ಐದು ದಶಕಗಳ ಮೊದಲು ಜಗತ್ಪ್ರಸಿದ್ಧ ನಯಾಗರಾ ಜಲಪಾತದ ಚಿತ್ರವೊಂದನ್ನು ನೋಡಿದ ಕ್ರೋವೇಷ್ಯಾದ ಬಾಲಕನೊಬ್ಬ ತನ್ನ ಚಿಕ್ಕಪ್ಪನ ಬಳಿ 'Some day I'll harness that power' ಎಂದು ಹೇಳಿದ. ಆತನೇ ಮುಂದೆ 1895 ರಲ್ಲಿ ನಯಾಗರಾದಲ್ಲಿ ಮೊತ್ತಮೊದಲ ಜಲವಿದ್ಯುತ್ ಸ್ಥಾವರ ಸ್ಥಾಪಿಸಿದ, ಇಡೀ ಜಗತ್ತಿಗೆ ಉಚಿತವಾಗಿ ವಿದ್ಯುತ್ ನೀಡುವ ಕನಸಿದ್ದ ಮಹಾ ವಿಜ್ಞಾನಿ ನಿಕೋಲಾ ಟೆಸ್ಲಾ. ಜಗತ್ತಿನಲ್ಲಿ ಬಹಳಷ್ಟು ಜನರಿಗೆ ಆತನ ಹೆಸರು ಗೊತ್ತಿಲ್ಲ, ವಿದ್ಯುಚ್ಛಕ್ತಿಗೆ ಎಡಿಸನ್, ರೇಡಿಯೋಗೆ ಮಾರ್ಕೋನಿ ಹೆಸರು ಪ್ರಚಲಿತದಲ್ಲಿವೆ. ಟೆಸ್ಲಾನ ಹೆಸರು ಜಗತ್ತಿಗೆ ತಿಳಿಯದಂತೆ ಮರೆಮಾಚಲಾಯಿತು. ಪಠ್ಯಪುಸ್ತಕಗಳಲ್ಲಿಯೂ ಅವನ ಸಾಧನೆಗಳಿಗೆ ಪ್ರಚಾರವಿಲ್ಲದಂತೆ

ನೋಡಿಕೊಳ್ಳಲಾಯಿತು. ಅವನ ಬೃಹತ್ ಕನಸು ಅರ್ಧಕ್ಕೇ ನಿಂತು, ದುಃಖಿಯಾಗಿ ಜೀವನದ ಅಂತ್ಯವನ್ನು ಕಳೆಯಬೇಕಾಯಿತು. ಆದರೆ ಆತ ಮಾಡಿದ್ದು ಮಾತ್ರ ಅಸಾಧ್ಯ ಸಾಧನೆ. ಇದೇ ಜುಲೈ 10, 2018ಕ್ಕೆ ನಿಕೊಲಾ ಟೆಸ್ಲಾ ಜನಿಸಿ 162 ವರ್ಷಗಳಾಗುವುದು.

ಟೆಸ್ಲಾ ಜನಿಸಿದ್ದು ಜುಲೈ 9, 1856 ರ ಮಧ್ಯರಾತ್ರಿಯಲ್ಲಿ. ಆ ರಾತ್ರಿ ವಿಪರೀತ ಗುಡುಗು ಮಿಂಚಿನ ಮಳೆ ಸುರಿಯುತ್ತಿತ್ತು. ಅಂತಹ ಕರಾಳ ರಾತ್ರಿ ಅವನು ಜನಿಸಿದ್ದನ್ನು ಕಂಡ ಸೂಲಗಿತ್ತಿ, ಈತ ಕತ್ತಲೆಯಲ್ಲಿ ಜನಿಸಿದ್ದಾನೆ. ಈತನಿಂದ ಜಗತ್ತಿಗೆ ಕೆಡುಕಾಗುತ್ತದೆ ಅಂದಾಗ, ಅವನ ತಾಯಿ, 'ಇಲ್ಲ ಅವನು ಬೆಳಕಿನ ಕಂದ' ಎಂದು ಉತ್ತರಿಸಿದಳು. ಟೆಸ್ಲಾನ ತಾಯಿ ಜೂಕಾ ಮ್ಯಾಂಡಿಕ್ ಓದು ಬರಹವೇನೂ ಕಲಿತಿರಲಿಲ್ಲವಾದರೂ ಆಕೆ ಗೃಹೋಪಯೋಗಿ ವಸ್ತುಗಳ ಸಂಶೋಧನೆ ಮಾಡುತ್ತಿದ್ದಳಂತೆ. ನಿಕೋಲಾ ಟೆಸ್ಲಾನ ತಂದೆ ಮಿಲುಟಿನ್ ಟೆಸ್ಲಾ ಸರ್ಬಿಯಾದಲ್ಲಿ ಪಾದ್ರಿಯಾಗಿದ್ದ.

ಬಾಲ್ಯದಲ್ಲಿ ಟೆಸ್ಲಾ ಯಾವತ್ತೂ ಒಂಟಿಯಾಗಿ ತನ್ನಷ್ಟಕ್ಕೆ ಇರುತ್ತಿದ್ದ. ತನ್ನೊಳಗೆ ಏನು ನಡೆಯುತ್ತಿದೆ ಎಂಬುದನ್ನು ಗಮನಿಸುತ್ತಿದ್ದ. ಹಾಗೆ ತನ್ನನ್ನೇ ಗಮನಿಸಿಕೊಳ್ಳುವುದು ದುಃಖ ಮತ್ತು ಖಿನ್ನತೆಯನ್ನು ಉಂಟುಮಾಡುತ್ತಿತ್ತು. ಆದರೆ ಅದು ಭವಿಷ್ಯದಲ್ಲಿ ತಾನು ವಿಜ್ಞಾನಿಯಾಗಿ ಕೆಲಸ ಮಾಡುವಾಗ ವರವಾಗಿ ಪರಿಣಮಿಸಿತು ಎಂದು ಟೆಸ್ಲಾ ಹೇಳಿಕೊಳ್ಳುತ್ತಾನೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

(ಅ) ಬಾಲ್ಯದಲ್ಲಿ ಯಾವುದು ಟೆಸ್ಲಾನಿಗೆ ಖಿನ್ನತೆಯನ್ನು ಉಂಟುಮಾಡುತ್ತಿತ್ತು ? *1*

(ಆ) ಟೆಸ್ಲಾನು ಏಕೆ ದುಃಖಿಯಾಗಿ ಜೀವನದ ಅಂತ್ಯವನ್ನು ಕಳೆಯಬೇಕಾಯಿತು ? *2*

(ಇ) ಟೆಸ್ಲಾನ ತಾಯಿ ಯಾವ ಸಂಶೋಧನೆ ಮಾಡುತ್ತಿದ್ದಳು ? *1*

(ಈ) ಟೆಸ್ಲಾನ ತಾಯಿ 'ಅವನು ಬೆಳಕಿನ ಕಂದ' ಎಂದು ಹೇಳಲು ಕಾರಣವೇನು ? *2*

**7.** ಕೆಳಗಿನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : *4*

ಪ್ರೀತಿಯ ಗುಣಿ ತೆಗೆದು
ಪ್ರೇಮದ ಪಾತಿಯ ಮಾಡಿ
ನೀತಿಯ ಬೀಜವ ಬಿತ್ತಿ
ವಾತ್ಸಲ್ಯದ ಫಲವ ಪಡೆವ
ದಿನಗಳೆಂದು ಬರುವವೋ ?

ಹರಿವ ನೀರು ಇರುವ ನೆಲ
ಸುಳಿವ ಗಾಳಿ ಉಣ್ಣುವನ್ನ
ತೊಡುವ ಬಟ್ಟೆ ಸುಡುವ ಬೆಂಕಿ
ಎಲ್ಲರಿಗೂ ಒಂದೇ ಎಂಬ
ದಿನಗಳೆಂದು ಬರುವವೋ ?

ದ್ವೇಷಾಸೂಯೆಗಳ ಬಂಡೆಯನ್ನು
ತಾಳ್ಮೆಯ ಸಿಡಿಮದ್ದು ಹಾಕಿ
ಸಿಡಿಸಿ ತೆಗೆದ ಸಹೋದರತೆಯ
ಸಸಿಗಳನ್ನು ಕಾಣುವಂಥ
ದಿನಗಳೆಂದು ಬರುವವೋ ?

ಅಸಮಾನತೆಯ ಕಡಲಿನಲ್ಲಿ
ಸಮಾನತೆಯ ದೋಣಿ ಬಿಟ್ಟು
ತೇಲುತ ದಡ ಸೇರಿಕೊಂಡು
ಸಾರ್ಥಕತೆಯ ಪಡೆಯುವ
ದಿನಗಳೆಂದು ಬರುವವೋ ?

ಜ್ಞಾನದ ಕಾರಂಜಿಯಲ್ಲಿ
ಅಜ್ಞಾನದ ಕೊಳೆಯ ತೊಳೆದು
ಜಾತಿಯ ವಿಷ ವೃಕ್ಷವನ್ನು
ಬೇರು ಸಹಿತ ಕಿತ್ತು ಒಗೆವ
ದಿನಗಳೆಂದು ಬರುವವೋ ?

ರಕ್ತ ಬೀಜಾಸುರರ ಸಂತೆಯಲ್ಲಿ
ಗೊಡ್ಡು ಮೌಢ್ಯಗಳ ನಾಶ ಮಾಡಿ
ಹಿಂಸೆಯ ರಕ್ತ ಆಳಿಸಿ
ಅಹಿಂಸೆಯ ಕಂದನೆತ್ತಿ ಮಾನವತೆಯ ಸಾರುವ
ದಿನಗಳೆಂದು ಬರುವವೋ ?

## ವಿಭಾಗ – C
## (ಬರವಣಿಗೆ ) : 15 ಅಂಕಗಳು

**8.** ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ : *5*

(ಅ) ಕಳೆದು ಹೋದ ಹಣದ ಪರ್ಸೊಂದು ನಿಮಗೆ ಸಿಕ್ಕಾಗ .....

(ಆ) ನೀವು ಕಣ್ಣಾರೆ ಕಂಡ ಅಗ್ನಿ ದುರಂತದ ಸಂದರ್ಭ .....

**9.** ನಿಮ್ಮ ಊರಿನಲ್ಲಿ ಸಾರ್ವಜನಿಕ ಗ್ರಂಥಾಲಯ ಸೌಲಭ್ಯ ಇಲ್ಲದಿರುವ ಕಾರಣ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೊಂದು ಪತ್ರ ಬರೆಯಿರಿ. *5*

**10.** ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ : *5*

ವ್ಯಕ್ತಿತ್ವ ಎಂಬುದು ಅನೇಕ ಶಕ್ತಿಗಳ ಸಂಗಮ. ಆದರ್ಶ, ಸದಾಚಾರ, ಶ್ರದ್ಧೆ, ನಿಷ್ಠೆ, ದಕ್ಷತೆ, ಎಚ್ಚರ ಸನ್ನಿವೇಶಗಳೊಡನೆ ಹೊಂದಿಕೊಳ್ಳುವ ಸಾಮರ್ಥ್ಯ, ವೃತ್ತಿಪ್ರಿಯತೆ, ಪರೋಪಕಾರಬುದ್ಧಿ, ಪ್ರಾಮಾಣಿಕತೆಗಳು ವ್ಯಕ್ತಿತ್ವ ನಿರ್ಮಿಸುವ ಶಕ್ತಿಗಳು.

ಈ ನಿಟ್ಟಿನಲ್ಲಿ ನೋಡಿದಾಗ ನಮಗೆ ವ್ಯಕ್ತಿ ಮುಖ್ಯವಲ್ಲ ವ್ಯಕ್ತಿತ್ವ ಮುಖ್ಯವೆಂಬುದು ಅರ್ಥವಾಗುತ್ತದೆ. ಹೂವಿಗೆ ಪರಿಮಳವಿದ್ದಂತೆ ಮಾನವರಿಗೆ ವ್ಯಕ್ತಿತ್ವ. ಪ್ರತಿಯೊಬ್ಬರ ಜೀವನದ ಒಳಿತು ಕೆಡುಕುಗಳಿಗೆ ಅವರೇ ಶಿಲ್ಪಿಗಳಾಗುತ್ತಾರೆ. ಮನುಷ್ಯ ತನ್ನ ಜೀವನವನ್ನು ತನ್ನಿಷ್ಟದಂತೆ ರೂಪಿಸಿಕೊಳ್ಳುತ್ತಾನೆ. ಅಂದರೆ ತನ್ನೆಲ್ಲ ಆಲೋಚನೆಗಳ ವಸ್ತುರೂಪವೇ ಮಾನವನಾಗಿರುತ್ತಾನೆ. ವ್ಯಕ್ತಿತ್ವವೆಂಬುದು ಹುಟ್ಟಿನಿಂದ ಸಾವಿನವರೆಗೆ ರೂಪುಗೊಳ್ಳುತ್ತಿರುತ್ತದೆ.

ಮನೋವಿಜ್ಞಾನಿಗಳ ಪ್ರಕಾರ ವ್ಯಕ್ತಿತ್ವ ರೂಪಣ ಐದು ಅಂಶಗಳನ್ನು ಆಧರಿಸಿದೆ. ಅವುಗಳೆಂದರೆ ಮುಕ್ತ ಅನುಭವ, ಆತ್ಮಸಾಕ್ಷಿಭಾವ, ಬಹಿರ್ಮುಖತ್ವ, ಒಪ್ಪಿಕೊಳ್ಳುವತನ ಮತ್ತು ನರವ್ಯಾಧಿತನ ಅಲ್ಲದೆ ವ್ಯಕ್ತಿತ್ವ ವಿಕಸನಗೊಳ್ಳಲು ಆರು ವಿಷಯಗಳಲ್ಲಿ ತನ್ನದೇ ಆದ ಪ್ರಭುತ್ವವನ್ನು ಸಾಧಿಸಿಕೊಳ್ಳಬೇಕಾಗುತ್ತದೆ ಅವುಗಳಲ್ಲಿ ಮೊದಲನೆಯದು ಭೌತಿಕ ಬೆಳವಣಿಗೆ.

ಮಾನವ ಏನನ್ನಾದರೂ ಸಾಧಿಸಲು ಪ್ರಪ್ರಥಮವಾಗಿ ದೇಹವರ್ಧನೆ ಅತಿ ಮುಖ್ಯ. ಜಾನಪದರು ಹೇಳುವಂತೆ "ಘಟ ಇದ್ದರೆ ಮಠ ಕಟ್ಟಬಹುದು", "ಅಂಗಾಲಲ್ಲಿ ತ್ರಾಣ ಇದ್ದರೆ ಬಂಗಾಳಕ್ಕಾದರೂ ನಡೀತೀನಿ" ಎನ್ನುವ ಮಾತುಗಳು ದೇಹಾರೋಗ್ಯ ಅತಿ ಮುಖ್ಯ ಎಂಬುದನ್ನು ಸಾರುತ್ತವೆ. ಇದನ್ನೇ ಸಂಸ್ಕೃತದಲ್ಲಿ ಶರೀರಮಾಧ್ಯಂ ಖಲುಧರ್ಮ ಸಾಧನಂ ಎಂದು ಹೇಳಲಾಗಿದೆ. ಒಟ್ಟಿನಲ್ಲಿ ಜೀವನದಲ್ಲಿ ಯಾವುದೇ ಸಾಧನೆ ಮಾಡಲು ಆರೋಗ್ಯವೆಂಬುದು ಅತಿ ಅಗತ್ಯವೆಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು.

## ವಿಭಾಗ – D

## (ಪಠ್ಯಗಳ ಅಧ್ಯಯನ) : 50 ಅಂಕಗಳು

### ಗದ್ಯಭಾಗ

**11.** ಒಂದು ವಾಕ್ಯದಲ್ಲಿ ಉತ್ತರಿಸಿ **(ನಾಲ್ಕಕ್ಕೆ)** : *1×4=4*

(ಅ) ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು ?

(ಆ) ಚಿಪ್ ಎಂದರೇನು ?

(ಇ) ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ ?

(ಈ) ಶೇಷನು ರಾಮಾಯಣದ ಕಥೆಯನ್ನು ಯಾರಿಗೆ ಹೇಳಿದನು ?

(ಉ) ಕನ್ನಡದ ಮೂಲಕ ಕಲಿತು ಶ್ರೇಷ್ಟ ವಿಜ್ಞಾನಿಯಾದವರು ಯಾರು ?

**12.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಎರಡಕ್ಕೆ)** : *2×2=4*

(ಅ) ಕಣ್ಣನ್ನು ಪರೀಕ್ಷಿಸಿದ ಡಾ। ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು ?

(ಆ) ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು ?

(ಇ) ನೀರಿಳೆಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು ಎಂದು ಮನೋರಮೆ ಹೇಳಿದ್ದೇಕೆ ?

**13.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : *3×1=3*

(ಅ) "ಈ ಅದೃಷ್ಟ ನಿನಗೂ ಇತ್ತಲ್ಲೆ?"

(ಆ) "ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು."

**14.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *4×1=4*

(ಅ) ವಾಲ್‌ಪರೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದನು ? ವಿವರಿಸಿ.

(ಆ) ಚಿನ್ನಮ್ಮನ ಕುಟುಂಬಕ್ಕೆ ಹೊಳೆಯ ಬಗ್ಗೆ ಅಸಹನೆ, ಕೋಪ ಉಂಟಾಗಲು ಕಾರಣವೇನು ?

## ಪದ್ಯಭಾಗ

**15.** ಒಂದು ವಾಕ್ಯದಲ್ಲಿ ಉತ್ತರಿಸಿ **(ನಾಲ್ಕಕ್ಕೆ)** : *1×4=4*

(ಅ) ಗುರು ಹೇಗೆ ವರ್ತಿಸಬಾರದು ಎಂದು ಉರಿಲಿಂಗಪೆದ್ದಿ ಅಭಿಪ್ರಾಯಪಡುತ್ತಾನೆ ?

(ಆ) ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು ?

(ಇ) ಕುಳಿತು ಕೆಮ್ಮುವ ಪ್ರಾಣಿ ಯಾವುದು ?

(ಈ) ಕವಿಯ ಪ್ರಕಾರ ತಿಂಗಳಿಗೊಂದು ಸಲವೂ ದೀಪ ಹಚ್ಚದ ಸ್ಥಳ ಯಾವುದು ?

(ಉ) ವ್ಯಥವಲ್ಲದ ಕೆಲಸ ಯಾವುದೆಂದು ಪ್ರೊ. ಟಿ. ಯಲ್ಲಪ್ಪ ಅಭಿಪ್ರಾಯಪಡುತ್ತಾರೆ ?

**16.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಎರಡಕ್ಕೆ)** : *2×2=4*

(ಅ) ಸೀತೆಯ ತಲ್ಲಣಕ್ಕೆ ಕಾರಣವೇನು ?

(ಆ) ಶುಚಿ ಮತ್ತು ಸ್ವಾದವನ್ನು ಕುರಿತು ಸೋಮನಾಥನ ಅಭಿಪ್ರಾಯವೇನು ?

(ಇ) ಕವಯಿತ್ರಿ ನಗುವ ನಗು ಎಂತಹುದು ?

**17.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : *3×1=3*

(ಅ) ನಾರುವ ದುರ್ಗಂಧ ಬಿಡಬಲ್ಲುದೆ.

(ಆ) ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

**18.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *4×1=4*

(ಅ) ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.

(ಆ) ವೃದ್ಧರ ತವಕ ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ ?

## ನಾಟಕ

**19.** ಒಂದು ವಾಕ್ಯದಲ್ಲಿ ಉತ್ತರಿಸಿ **(ಮೂರಕ್ಕೆ)** : *1×3=3*

(ಅ) ಆನೆಯ ಮಾವುತನ ಹೆಸರೇನು ?

(ಆ) ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು ?

(ಇ) ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು ?

(ಈ) ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು ?

**20.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *2×1=2*

(ಅ) ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿವ ಕಾರಣವೇನು ?

(ಆ) ಖೇಡಿಗಳು ನಾಗರಾಜನನ್ನು ಖೂನಿ ಮಾಡಿದರೆಂದು ರಾಮಪ್ಪ ಹೇಗೆ ವಿವರಿಸಿದನು ?

**21.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : *3×1=3*

(ಅ) ಹೌದಾ ಎಲ್ಲಿ ಕಚ್ಚಿತ್ತೋ ಜಬ್ಬಾರ್ ?

(ಆ) ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದ ಹಾಗೆ.

**22.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *4×1=4*

(ಅ) ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ ?

(ಆ) ಆನೆಯು ಇಲ್ಲಿ ಬಾಯಿಲ್ಲದ ಜನರ ಸಂಕೇತವಾಗಿರುವುದನ್ನು ವಿಶ್ಲೇಷಿಸಿ.

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ)

**23.** ಕೆಳಗಿನ ಯಾವುದಾದರೂ **ಇಬ್ಬರು** ಕವಿ–ಕೃತಿ ಪರಿಚಯ ಮಾಡಿಕೊಡಿ : *4×2=8*

(ಅ) ಕುಮಾರವ್ಯಾಸ

(ಆ) ಪಿ. ಲಂಕೇಶ್

(ಇ) ದ.ರಾ. ಬೇಂದ್ರೆ

(ಈ) ನೇಮಿಚಂದ್ರ